# ವಿಜಯ ಕಾಲೇಜು ಆರ್.ವಿ.ರಸ್ತೆ ಬಸವನಗುಡಿ ಬೆಂಗಳೂರು – 560 004

ಸಮಾಜ ಕಲ್ಯಾಣ ಇಲಾಖೆಯಿಂದ 2018–19ನೇ ಸಾಲಿಗೆ **ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕಾಗಿ "ನವೀಕರಣ" ಆನ್‌ಲೈನ್ ಮುಖಾಂತರ** ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಈಗಾಗಲೇ SMIS ವೆಬ್ ಸೈಟ್‌ನಲ್ಲಿ ನೊಂದಣಿ ಮಾಡಿಸಿರುವ ವಿದ್ಯಾರ್ಥಿಗಳು STUDENT LOGIN ನಲ್ಲಿ ವಿದ್ಯಾರ್ಥಿಯ ಈ ಹಿಂದಿನ ನೊಂದಣಿ ಸಂಖ್ಯೆ ಹಾಗೂ ವಿದ್ಯಾರ್ಥಿಯ ಜನ್ಮ ದಿನಾಂಕವನ್ನು ಪಾಸ್ ವರ್ಡ್ ಆಗಿ ಬಳಸಿಕೊಂಡು ಆನ್ ಲೈನ್‌ನಲ್ಲಿ **"ನವೀಕರಣ"** ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವುದು. ವಿದ್ಯಾರ್ಥಿಯು ವಿದ್ಯಾರ್ಥಿನಿಲಯದಲ್ಲಿ ಇದ್ದಲ್ಲಿ ವಾರ್ಡನ್‌ರವರ ದೃಢೀಕರಣ ಕಡ್ಡಾಯವಾಗಿರುತ್ತದೆ.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಪ್ರತಿಗಳು:**

: ಭರ್ತಿಮಾಡಿದ ಆನ್‌ಲೈನ್ ಅರ್ಜಿಯ ದೃಢೀಕೃತ ಪ್ರತಿ

: ವಿದ್ಯಾರ್ಥಿಯು ವಿದ್ಯಾರ್ಥಿನಿಲಯದಲ್ಲಿ ಇದ್ದಲ್ಲಿ ವಾರ್ಡನ್‌ರವರ ದೃಢೀಕರಣ ಕಡ್ಡಾಯವಾಗಿರುತ್ತದೆ.

: ವಿದ್ಯಾರ್ಥಿಯ ತಂದೆಯವರ ಆದಾಯ ಪ್ರಮಾಣ ಪತ್ರ/ ತಂದೆ ಜೀವಂತವಾಗಿಲ್ಲದಿದ್ದಲ್ಲಿ ತಾಯಿಯವರ ಆದಾಯ ಪ್ರಮಾಣ ಪತ್ರ ಹಾಗೂ ತಂದೆಯ ಮರಣ ಪ್ರಮಾಣ ಪತ್ರ ಸಲ್ಲಿಸುವುದು. ತಂದೆ ಮತ್ತು ತಾಯಿ ಇಬ್ಬರೂ ಜೀವಂತವಾಗಿಲ್ಲದಿದ್ದಲ್ಲಿ ಪೋಷಕರ ಆದಾಯ ಪತ್ರವನ್ನು ಸಲ್ಲಿಸುವುದು. **(ಆದಾಯ ಪ್ರಮಾಣ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ 5 ವರ್ಷದ ಒಳಗೆ ಪಡೆದಿರುವಂತಹದ್ದು ಆದಾಯ ಪತ್ರದ ಅವಧಿ ಒಂದು ವರ್ಷದ ವರೆಗೆ ಮಾತ್ರ ಎಂದು ನಮೂದಾಗಿದ್ದಲ್ಲಿ ಅಂತಹ ಆದಾಯ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ)** ವಿದ್ಯಾರ್ಥಿಯ ಪೋಷಕರು ಸರ್ಕಾರಿ/ಅರೆ ಸರ್ಕಾರಿ ಉದ್ಯೋಗಿಯಾಗಿದ್ದರೆ, ಕಡ್ಡಾಯವಾಗಿ ಅರ್ಜಿ ಸಲ್ಲಿಸುವ ಹಿಂದಿನ ತಿಂಗಳ ವೇತನ ಪ್ರಮಾಣ ಪತ್ರವನ್ನು ಸಲ್ಲಿಸುವುದು.

: ವಿದ್ಯಾರ್ಥಿಯ ಜಾತಿ ಪ್ರಮಾಣ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ.

: ವಿದ್ಯಾರ್ಥಿಯ ಹಾಲಿ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಯ ಪುಸ್ತಕದ ದೃಢೀಕೃತ ಜೆರಾಕ್ಸ್ ಪ್ರತಿ (ವಿದ್ಯಾರ್ಥಿಯ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು ಮತ್ತು ಸದರಿ ಖಾತೆಗೆ ಆಧಾರ್ ಲಿಂಕ್ ಕಡ್ಡಾಯವಾಗಿರಬೇಕು ಮತ್ತು ಚಾಲ್ತಿಯಲ್ಲಿರಬೇಕು)

: ವಿದ್ಯಾರ್ಥಿಯ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ದೃಢೀಕೃತ ಪ್ರತಿ.

: ಹಿಂದಿನ ವರ್ಷದ ಅಂಕಪಟ್ಟಿಗಳ ದೃಢೀಕೃತ ಜೆರಾಕ್ಸ್ ಪ್ರತಿ.

: ಕಾಲೇಜಿಗೆ ಸಲ್ಲಿಸಿರುವ ಶುಲ್ಕದ ರಶೀದಿ

: ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ

ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಮಂಜೂರಾತಿಗೆ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಮೇಲಿನ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವುದು. ಅಗತ್ಯ ದಾಖಲೆಗಳಿಲ್ಲದ ಅರ್ಜಿಗಳನ್ನು ಮಂಜೂರಾತಿಗಾಗಿ ಪರಿಗಣಿಸಲಾಗುವುದಿಲ್ಲ. ಹಾಗೂ **ಭರ್ತಿಮಾಡಿದ ಆನ್‌ಲೈನ್ ಅರ್ಜಿಯ ದೃಢೀಕೃತ ಪ್ರತಿಯೊಂದಿಗೆ ಮೇಲಿನ ಎಲ್ಲಾ ದಾಖಲೆಗಳನ್ನು ದಿನಾಂಕ 15–10–2018ರೊಳಗೆ ಕಾಲೇಜಿನ ಕಛೇರಿಗೆ ಸಲ್ಲಿಸಬೇಕಾಗಿ ತಿಳಿಸಲಾಗಿದೆ.**

**ಪ್ರಾಂಶುಪಾಲರು**